# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ.89/2020

ಚಾಸಾಃ 26 ಪ್ರಾಸಾಃ 15

**ದಿನಾಂಕ 27.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಹೆಸರು | ರಮೇಶ್ ಕೆ |
| ತಂದೆಯ ಹೆಸರು | ಕರಿಲಿಂಗಯ್ಯ |
| ವಯಸ್ಸು | 40 ವರ್ಷ |
| ಕೆಲಸ | ಸಿವಿಲ್ ಪೊಲೀಸ್ ಕಾನ್ಸ್ ಸ್ಟೇಬಲ್ , ತುಮಕೂರು |
| ವಾಸಸ್ಥಳ | ತುಮಕೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

2016 ರಿಂದ 2022 ರವರಿಗೆ ಕ್ಯಾತ್ಸಂದ್ರ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ತನಿಖಾ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ . ಪ್ರಕರಣದ ತನಿಖಾಧಿಕಾರಿಗಳಾದ ಚಾಸಾ-37 ರವರೊಂದಿಗೆ ಆರೋಪಿಗಳು ತೋರಿಸಿರುವ ಕೃತ್ಯ ನಡೆದ ಸ್ಥಳದಲ್ಲಿ ತನಿಖಾಧಿಕಾರಿಗಳು ಸೂಚಿಸಿದಂತೆ ಸರ್ಕಾರದಿಂದ ಕಚೇರಿಗೆ ನೀಡಿರುವ ಸೋನಿ ಹ್ಯಾಂಡಿ ಕ್ಯಾಮರದಿಂದ ಪಂಚನಾಮೆಯ ಸಮಯದಲ್ಲಿ ಪೋಟೋ ಮತ್ತು ವಿಡಿಯೋಗಳನ್ನು ಮಾಡಿರುತ್ತೇನೆ .

2) ಅಮಾನತ್ತುಪಂಚನಾಮೆಯ ಸಮಯದಲ್ಲಿ ತನಿಖಾಧಿಕಾರಿಗಳು ಸೂಚಿಸಿದಂತೆ ಸೋನಿ ಹ್ಯಾಂಡಿ ಕ್ಯಾಮರದಿಂದ ಪೋಟೋಗಳನ್ನು ಮತ್ತು ವಿಡಿಯೋಗಳನ್ನು ಮಾಡಿರುತ್ತೇನೆ. ನಿಪಿ-14 ರ ಮೇಲೆ ಇರುವ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-14(ಬಿ) ಎಂದು ಗುರುತಿಸಲಾಯಿತು. ನಿಪಿ-15 ರ ಮೇಲೆ ಇರುವ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-15(ಬಿ) ಎಂದು ಗುರುತಿಸಲಾಯಿತು. ತನಿಖಾ ಸಮಯದಲ್ಲಿ ತೆಗೆದ ಪೋಟೋಗಳನ್ನು ಮತ್ತು ವಿಡಿಯೋಗಳನ್ನು ಡಾಟಾ ಕೇಬಲ್ ಆಳವಡಿಸಿ ಸಿಡಿಗೆ ಬರ್ನ್ ಮಾಡಿ ಸಿಡಿಯನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ . ಸಿಡಿಯನ್ನು ಈಗಾಗಲೇ ನಿಪಿ-16 ಎಂದು ಗುರುತಿಸಿರುತ್ತಾರೆ . ಸಿಡಿಗೆ ವರ್ಗಾಯಿಸಿರುವ ಬಗ್ಗೆ ಕಲಂ.65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದ ಪ್ರಮಾಣ ಪತ್ರವನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನಿಪಿ-26 ಎಂದು, ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು.

3)ಪೋಟೋ ಮತ್ತು ವಿಡಿಯೋ ಮಾಡಿ ಸಿಡಿಗೆ ಬರ್ನ್ ಮಾಡಿ ಕಾಪಿ ಮಾಡುವ ಜ್ಞಾನವನ್ನು ಹೊಂದಿರುತ್ತೇನೆ. ತನಿಖಾ ಸಮಯದಲ್ಲಿ ನಾನು ಉಪಯೋಗಿಸಿರುವ ಸೋನಿ ಹ್ಯಾಂಡಿ ಕ್ಯಾಮರ ಸುಸ್ಥಿತಿಯಲ್ಲಿ ಇತ್ತು.

**<u>ಪಾಟೀ ಸವಾಲು 1 ಮತ್ತು 2 ಆರೋಪಿಯ ಪರ ಶ್ರೀ ಕೆ ಹೆಚ್ ಜಿ ವಕೀಲರಿಂದ ಃ-</u>**

4) ನಾನು ವಿತರಿಸಿರುವ ಕಲಂ.65(ಬಿ) ಪ್ರಮಾಣ ಪತ್ರದಲ್ಲಿ ಹ್ಯಾಂಡಿ ಕ್ಯಾಮರ ಯಾವ ಕಂಪನಿಯದು ಎಂದು ನಮೂದು ಮಾಡಿರುವುದಿಲ್ಲ. ಅದೇ ರೀತಿ ಪೋಟೋ ಮತ್ತು ವಿಡಿಯೋಗಳನ್ನು ಯಾವ ಕಂಪನಿಯ ಸಿಡಿಯಲ್ಲಿ ಬರ್ನ್ ಮಾಡಿ ಕೊಟ್ಟಿದ್ದೇನೆಂದು ಕಲಂ.65(ಬಿ) ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ. ಹ್ಯಾಂಡಿ ಕ್ಯಾಮರ ಉಪಯೋಗಿಸುವ ಬಗ್ಗೆ ನನ್ನ ಬಳಿ ಯಾವುದೇ ಪ್ರಮಾಣ ಪತ್ರವಿಲ್ಲ, ಆದರೆ ಇಲಾಖೆಯಿಂದ ತರಬೇತಿ ನೀಡಿರುತ್ತಾರೆ. ನಾನು ಅಮಾನತ್ತುಪಂಚನಾಮೆಯಲ್ಲಿ ವಿಡಿಯೋಗ್ರಾಫರ್ ಆಗಿ ಕೆಲಸವನ್ನು ಮಾಡಿರುತ್ತೇನೆ. ಪಿಸಿ-153 ಸಂತೋಷ್ ರವರು ಬರಹಗಾರರು ಆಗಿರುತ್ತಾರೆ. ಯಾವುದೇ ಛಾಯಚಿತ್ರವನ್ನು ತೆಗೆದಾಗ ಅದರಲ್ಲಿ ದಿನಾಂಕ ಮತ್ತು ಸಮಯ ನಮೂದು ಇರುತ್ತದೆ ಅಂದರೆ ಸರಿ. ನಾನು ತೆಗೆದ ಪೋಟೋಗಳನ್ನು ದಿನಾಂಕ ನಮೂದು ಇರುತ್ತದೆ. ತಾವು ಯಾವುದೇ ಅಮಾನತ್ತು ಪಂಚನಾಮೆಯಲ್ಲಿ ಭಾಗವಹಿಸಿಲ್ಲ ಅಂದರೆ ಸರಿಯಲ್ಲ. ಅಮಾನತ್ತುಪಂಚನಾಮೆಯಲ್ಲಿ ಬರೆದಿರುವ ಅಂಶಗಳು ಗೊತ್ತು . ಅದರ ಚಕ್ಕುಬಂದಿಯೂ ಸಹ ಗೊತ್ತು. ಮಚ್ಚು ಇರುವ ಬಗ್ಗೆ ಉಲ್ಲೇಖವಿದೆ ಮತ್ತು ಪ್ಲಾಸ್ಟಿಕ್ ಹಿಡಿ ಮತ್ತು ಕಬ್ಬಿಣದ ಮಚ್ಚು. ಹಿಡಿ ಯಾವ ಬಣ್ಣದು ಎಂದು

ನಮೂದು ಮಾಡಿಲ್ಲ. ಯಾವುದೇ ಮುದ್ದೆಮಾಲುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಮುಮಾ-1 ರಿಂದ 5 ವಸ್ತುಗಳ ತರಹನೇ ಎಲ್ಲಾ ಕಡೆ ಸಿಗುತ್ತದೆ ಅಂದರೆ ಸರಿ, ಆದರೆ ಆದಿನ ಅಮಾನತ್ತುಪಡಿಸಿಕೊಂಡ ವಸ್ತುಗಳೇ ಮುಮಾ-1 ರಿಂದ 5. ತಾವು ಯಾವುದೇ ಸ್ಥಳಕ್ಕೆಹೋಗಿಲ್ಲ ಮತ್ತು ಅಮಾನತ್ತುಪಂಚನಾಮೆ ಮಾಡಿಲ್ಲ, ಆಕುರಿತು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ .

- ಮರುವಿಚಾರಣೆ ಇಲ್ಲ-

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.